ಹೊಂದಿದ್ದಾರೆ" ಎನ್ನುತ್ತಿದ್ದ ಮಹಾಶ್ವೇತಾ ದೇವಿ ಅವರು ಆದಿವಾಸಿಗಳೊಂದಿಗೆ ಕಳ್ಳುಬಳ್ಳಿಯ ನಂಟು ಹೊಂದಿದ್ದರು. ಈ ನಂಟು ಒಮ್ಮಿಂದೊಮ್ಮೆಗೇ ಸಾಧ್ಯವಾದುದಲ್ಲ. 1965ರ ಸುಮಾರಿಗೆ ಆದಿವಾಸಿಗಳ ಬದುಕಿನ ತವಕತಲ್ಲಣಗಳ ಬಗ್ಗೆ ಅವರು ಯೋಚಿಸತೊಡಗಿದರೂ, ಅದಕ್ಕೆ ಮೊದಲೇ ಅವರಿಗೆ ಆದಿವಾಸಿಗಳೊಂದಿಗೆ ಒಳಕೆಯಿತ್ತು. ಬಾಲ್ಯದಲ್ಲಿ ಅವರ ಕುಟುಂಬ ಮಿಡ್ನಾಪುರ್‌ನಲ್ಲಿ ಇದ್ದಾಗ, ಅಲ್ಲಿದ್ದ ಸಂತಾಲ್ ಸಮುದಾಯದೊಂದಿಗೆ ಮಹಾಶ್ವೇತಾ ದೇವಿ ಅವರ ಕುಟುಂಬ ಒಡನಾಟ ಹೊಂದಿತ್ತು. ಶಾಂತಿನಿಕೇತನದಲ್ಲಿ ಇದ್ದಾಗಲೂ ಗುಡ್ಡಗಾಡು ಜನರೊಂದಿಗೆ ಅವರು ಸ್ನೇಹ ಹೊಂದಿದ್ದರು. "ನಾನು ಆದಿವಾಸಿಗಳನ್ನು ಪ್ರೀತಿಸಿದೆ, ಗೌರವಿಸಿದೆ. ಮೊದಲಿಗೆ ನಾನು ಅವರನ್ನು ಒಪ್ಪಿಕೊಂಡೆ. ನಂತರ ಅವರು ನನ್ನನ್ನು ಒಪ್ಪಿಕೊಂಡರು", "ನಾನೊಂದು ನದಿ ಇದ್ದಂತೆ. ದೊಡ್ಡ ನದಿಯಲ್ಲ – ಪುಟ್ಟ ನದಿ. ಆದಿವಾಸಿಗಳ ಬದುಕನ್ನು ಅನುದ್ದೇಶಿತವಾಗಿ ಪ್ರವೇಶಿಸಿದ ಹರಿವಿನಂತೆ ನನ್ನ ಅವರ ಸಂಬಂಧ" ಎನ್ನುವ ಮಹಾಶ್ವೇತಾ ದೇವಿ ಅವರ ಹೇಳಿಕೆಗಳ ಹಿನ್ನೆಲೆಯಲ್ಲಿ ಈ ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಸಂದರ್ಶನವೊಂದರಲ್ಲಿ ಅವರು ಹೇಳಿದಂತೆ: "ಆದಿವಾಸಿಗಳೊಂದಿಗಿನ ಒಡನಾಟ ನನ್ನ ಕೊನೆಯ ನಿಲ್ದಾಣ".

ತಮ್ಮ ಮೊದಲ ಕೃತಿ, ಝಾನ್ಸಿ ರಾಣಿಯ ಕುರಿತು ಬರೆಯುವಾಗ ಮಹಾಶ್ವೇತಾ ದೇವಿ ಅವರು ಸಾಕಷ್ಟು ಅಧ್ಯಯನ ನಡೆಸಿದ್ದರು. ಝಾನ್ಸಿ, ಗ್ವಾಲಿಯರ್ ಸೇರಿದಂತೆ ಝಾನ್ಸಿ ರಾಣಿಯ ಚರಿತ್ರೆಯ ಪಿಸುನುಡಿಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲ ಸಂಚರಿಸಿದರು. ರಾಣಿಯನ್ನು ಆವಾಹಿಸಿಕೊಂಡು ಇಪ್ಪತ್ತೆಂಟರ ಯುವತಿ ಒಂಟಿಯಾಗಿ ಊರೂರು ಸುತ್ತಿದ್ದು ಐವತ್ತರ ದಶಕದಲ್ಲಿ ಸಾಮಾನ್ಯ ಸಂಗತಿಯಲ್ಲ. ಚರಿತ್ರೆಯ ಕಡುಮೋಹಿಯಾಗಿದ್ದ ಈ ಯುವತಿ, ಮಾಗಿದಂತೆಲ್ಲ ಜನಸಾಮಾನ್ಯರ ಚರಿತ್ರೆಯ ಬಗ್ಗೆ ಅನುರಕ್ತಳಾದುದು ಒಂದು ಚಾರಿತ್ರಿಕ ಸಂಗತಿಯೇ ಹೌದು.

ಸಾಧಾರಣ ಮನುಷ್ಯರೊಂದಿಗಿನ ಒಡನಾಟ ಹಾಗೂ ಅವರ ಸಾಧಾರಣ ಕನಸುಗಳಿಗೆ ಸ್ಪಂದಿಸುವುದರಲ್ಲಿ ಮಹಾಶ್ವೇತಾ ದೇವಿ ಅವರ ಬದುಕು ಮೀಸಲಾಗಿತ್ತು. ಮುಖ್ಯವಾಗಿ ಆದಿವಾಸಿಗಳ ಹಿತಾಸಕ್ತಿಗಾಗಿ ದುಡಿದರೂ ಅವರ ಒಟ್ಟಾರೆ ಆಸಕ್ತಿ ಎಲ್ಲ ದೀನದುರ್ಬಲರ ಕಣ್ಣೀರನ್ನು ಒರೆಸುವುದಾಗಿತ್ತು. ಆದಿವಾಸಿಗಳ ಹಕ್ಕುಗಳಿಗಾಗಿ ದನಿ ಎತ್ತಿದಂತೆಯೇ, ಅಭಿವೃದ್ಧಿ ಚಟುವಟಿಕೆಗಳಿಗಾಗಿ ರೈತರ ಭೂಮಿ ಕಸಿದುಕೊಳ್ಳುವುದನ್ನು ವಿರೋಧಿಸಿದರು. ನಕ್ಸಲ್ ಸಮಸ್ಯೆಯ ಬಗ್ಗೆ ಕಾಳಜಿಯಿಂದ ಮಾತನಾಡಿದರು. ಅಸ್ಪೃಶ್ಯತೆಯನ್ನು ವಿರೋಧಿಸಿದ್ದರು. ಕಾಡುಗಳು, ಹಳ್ಳಿಗಳು, ಸಣ್ಣ–ದೊಡ್ಡ ನಗರಗಳು – ಎಲ್ಲೆಡೆಯೂ ಮಾನವೀಯತೆಯ ದೀಪವನ್ನು ಹಚ್ಚುತ್ತಾ ಹೊರಟರು. ಆ ಬೆಳಕಿನ ದಾರಿಯಲ್ಲಿ ನಡೆಯುತ್ತಾ ತಾವೇ ಒಂದು ಬೆಳಕಿನ ಪುಂಜವಾಗಿ ರೂಪುಗೊಂಡರು. ಅವರು ಅಸಂಖ್ಯ ಜನರ ಪಾಲಿಗೆ ಅಕ್ಕ, ಅಮ್ಮ. ಮತ್ತೂ ಸರಳವಾಗಿ ಹೇಳುವುದಾದರೆ, ಆಧುನಿಕ ಭಾರತದ ರಾಜಕೀಯ–ಸಾಮಾಜಿಕ ಚರಿತ್ರೆಯ ಸಂಪುಟದಲ್ಲಿ ಅವರೊಂದು ಪ್ರಮುಖ ಮಾನವೀಯ ಅಧ್ಯಾಯ.